

ನಿವೇದಿತಾ
ಕೈಯಲ್ಲರಳುತ್ತಿರುವ
ಮಣ್ಣಿನ ಗಣಪ

ರೇಖಾಚಿತ್ರಗಳನ್ನು ರಚಿಸುತ್ತಿದ್ದ ಅವರಿಗೆ ಮೈಸೂರು ಮಹಾರಾಜರು ಚಿನ್ನದ ಪದಕ ನೀಡಿದ್ದರು. ಮೈಸೂರಿನ ಮರದ ಅರಮನೆಗೆ ಬೆಂಕಿ ಬಿದ್ದಾಗ ಅವರ ಹಲವು ಚಿತ್ರಗಳು ಸುಟ್ಟುಹೋದವು. ಕೆಲವು ಚಿತ್ರಗಳು ನಮ್ಮ ಕುಟುಂಬ ಬಂದು ನೆಲೆಸಿದ ಶಿಕಾರಿಪುರ ಹಾಗೂ ಶಿವಮೊಗ್ಗದಲ್ಲಿ ಇವೆ ಎಂಬುದನ್ನು ಮನೆಯಲ್ಲಿ ಕೇಳಿದ ನಮಗೆ ಏನೋ ಒಂದು ಪುಳಕ. ನಮ್ಮ ಅಜ್ಜಂದಿರೂ ಕಲೆಯನ್ನೇ ನಂಬಿದವರು. ನಮ್ಮ ತಂದೆ ಜ್ಞಾನೇಶ್ವರ ಹಾಗೂ ದೊಡ್ಡಪ್ಪ ಕಾಶೀನಾಥ್ ಅವರು ವಿಗ್ರಹಗಳನ್ನು ಸಿದ್ಧಪಡಿಸುವ ಹಾಗೂ ಚಿತ್ರಗಳನ್ನು ರಚಿಸುವ ಕಾಯಕವನ್ನು ಮುಂದುವರಿಸಿಕೊಂಡು ಬಂದರು' ಎಂದು ಕುಟುಂಬದ ಕಲಾಸೇವೆಯ ಹಿನ್ನೆಲೆಯನ್ನು ಡಾ. ಪ್ರಸಾದ್ ವಿವರಿಸಿದರು.

'ಪುಣೆ, ಹುಬ್ಬಳ್ಳಿಯಿಂದ ಗಣೇಶ ಮೂರ್ತಿಗಳು ಆಗ ಶಿವಮೊಗ್ಗ ಪರಿಸರದಲ್ಲಿ ಮಾರಾಟಕ್ಕೆ ಬರುತ್ತಿದ್ದವು. ಇದನ್ನು ಗಮನಿಸಿದ ನಮ್ಮ ತಂದೆ ಜ್ಞಾನೇಶ್ವರ ಅವರು ಗಣೇಶ ಮೂರ್ತಿಗಳನ್ನು ನಾವೇ ಏಕೆ ಸಿದ್ಧಪಡಿಸಬಾರದು ಎಂದು 1960 ಸುಮಾರಿಗೆ ಆರಂಭಿಸಿದರಂತೆ. ಅಲ್ಲಿಂದ ಶುರುವಾಯಿತು ನಮ್ಮ ಕುಟುಂಬದ ಗಣೇಶಸೇವೆ. ನಾವು ನಮ್ಮ ಬಾಲ್ಯದಲ್ಲಿ ತಂದೆಯವರೊಂದಿಗೆ ಕೈಜೋಡಿಸಲು ಪ್ರಾರಂಭಿಸಿದೆವು. ಆರಂಭದಲ್ಲಿ ಪುಟ್ಟ ಮೂರ್ತಿಗಳನ್ನು ಸಿದ್ಧಪಡಿಸುವುದು ನನ್ನ ಮತ್ತು ಅಣ್ಣನ ಕೆಲಸವಾಗಿತ್ತು. ತಂದೆಯವರು ದೊಡ್ಡ ಮೂರ್ತಿಗಳನ್ನು ಸಿದ್ಧಪಡಿಸುತ್ತಿದ್ದರು. ಶಿವಮೊಗ್ಗ, ಚಿತ್ರದುರ್ಗ, ಹುಬ್ಬಳ್ಳಿ, ಅರಸೀಕೆರೆ — ಹೀಗೆ ಎಲ್ಲೆಡೆ ನಮ್ಮ ಕುಟುಂಬ ಸಿದ್ಧಪಡಿಸುತ್ತಿದ್ದ ಮಣ್ಣಿನ ಗಣೇಶ ಮೂರ್ತಿಗಳಿಗೆ ಬೇಡಿಕೆಯಿತ್ತು' ಎಂದು ನೆನಪುಗಳನ್ನು ಚಪ್ಪರಿಸುತ್ತಾರೆ.

'ಮನೆಯಲ್ಲೇ ಗಣೇಶ ಮೂರ್ತಿ ಮಾಡುತ್ತಿದ್ದ ನಮಗೆ ಬೇಡಿಕೆ ಹೆಚ್ಚಾಗಿದ್ದರಿಂದ ಸ್ಥಳದ ಅಭಾವವೂ ಉಂಟಾಯಿತು. ಆಗ ಶಿವಮೊಗ್ಗದ ರಾಮಣ್ಣ ಶ್ರೇಷ್ಠಿ ಪಾರ್ಕ್ ಬಳಿ ಜಾಗವನ್ನು



ಕಲಾವಿದ ಡಾ. ಪ್ರಸಾದ್ ಕವಟೇಕರ್



ಡಾ. ನಿವೇದಿತಾ ಅವರ ಚುಕ್ಕಿಗಳಲ್ಲಿ ರಾಜಣ್ಣ

ನೀಡಿದ್ದರು. ಅಲ್ಲಿ ಗಣೇಶ ಮೂರ್ತಿಗಳನ್ನು ಮಾಡಿ ಇಡುತ್ತಿದ್ದೆವು. ಶಾಲೆ ಮುಗಿಸಿದ ಬಳಿಕ ನಾವೆಲ್ಲರೂ ಅಲ್ಲಿಗೆ ಹೋಗಿ, ತಂದೆಯವರೊಂದಿಗೆ ಕೈಜೋಡಿಸುತ್ತಿದ್ದೆವು. ಆಗಿನಿಂದಲೂ ಪ್ರತಿ ವರ್ಷ ಗಣೇಶ ಹಬ್ಬಕ್ಕೆ ಮೂರ್ತಿ ಸಿದ್ಧಪಡಿಸುವುದನ್ನು ನಿಲ್ಲಿಸಲಿಲ್ಲ. ವೈದ್ಯಕೀಯ ವೃತ್ತಿಯ ಒತ್ತಡ ಹೆಚ್ಚಾಗಿದ್ದರಿಂದ ಹೆಚ್ಚು ಮೂರ್ತಿಗಳನ್ನು ಮಾಡಲು ಸಾಧ್ಯವಾಗದಿದ್ದರೂ, ಕೆಲವಾದರೂ ಮೂರ್ತಿಗಳನ್ನು ಮಾಡುವ ಪರಿಪಾಟ ಮುಂದುವರಿಸಿಕೊಂಡು ಬರುತ್ತಿದ್ದೇನೆ' ಎಂದು ಪ್ರಸಾದ್ ತಮ್ಮ ಕಲಾಸೇವೆಯನ್ನು ತಿಳಿಸಿದರು.

ದಿನಕ್ಕೆ 5 ರಿಂದ 6 ಗಂಟೆ ಕೂತರೆ ಮೂರು ದಿನಗಳ ಒಳಗೆ ಸುಂದರವಾದ ಗಣಪತಿ ಮೂರ್ತಿಯನ್ನು ಸಿದ್ಧಪಡಿಸಬಹುದು ಎನ್ನುವುದು ಅವರ ಅನುಭವದ ಮಾತು. ಒಮ್ಮೆ ತುರ್ತು ಅಗತ್ಯಕ್ಕಾಗಿ 3 ಗಂಟೆಯೊಳಗೆ ಒಂದು ಮೂರ್ತಿಯನ್ನು ಸಿದ್ಧಪಡಿಸಿದ ಉದಾಹರಣೆಯೂ ಇದೆ.

'ಕಳೆದ ವರ್ಷ ನನ್ನ ಪತ್ನಿ ಡಾ. ನಿವೇದಿತಾ ಗೌರಿಯನ್ನು ಮಾಡಿದ್ದರು. ನಾನು ಹಾಗೂ ನನ್ನ ಮಗ ಗಣೇಶ ಮೂರ್ತಿ ಮಾಡಿದೆವು. ಈ ಬಾರಿಯೂ ಮಣ್ಣನ್ನು ತರಿಸಿದ್ದೇನೆ. ಮೂರ್ತಿ ಮಾಡುವ ಕೆಲಸ ಇನ್ನಷ್ಟೇ ಆರಂಭಿಸಬೇಕಿದೆ' ಎಂದರು ಪ್ರಸಾದ್.

ಮೂರ್ತಿ ಸಿದ್ಧಪಡಿಸುವುದರ ಜತೆಗೆ ಚಿತ್ರಕಲೆಯಲ್ಲೂ ಡಾ. ಪ್ರಸಾದ್ ಕುಟುಂಬ ಪಳಗಿದೆ. ಡಾ. ನಿವೇದಿತಾ ಅವರು ಚುಕ್ಕಿ ಚಿತ್ರದಲ್ಲಿ ರಾಜ್‌ಕುಮಾರ್, ಐಶ್ವರ್ಯಾ ರೈ ಹಾಗೂ ಇನ್ನಿತರರ ಚಿತ್ರಗಳನ್ನು ರಚಿಸಿದ್ದಾರೆ. ಮಗ ಅದ್ವೈತ್ ಕೂಡ ಪಾಲಕರ ಕಲೆಯನ್ನು ರೂಢಿಸಿಕೊಂಡು ಚಿತ್ರ ರಚನೆಯಲ್ಲಿ ತೊಡಗಿದ್ದಾನೆ. ತಲೆಮಾರುಗಳ ನಂತರ ವೃತ್ತಿ ಬದಲಾದರೂ ಕಲಾಸೇವೆಯನ್ನು ಮುಂದುವರಿಸಿಕೊಂಡು ಬಂದಿರುವ ಅಪರೂಪದ ಕುಟುಂಬವಿದು.

ಪ್ರತಿಕ್ರಿಯಿಸಿ: feedback@sudha.co.in